ಎಂ.ವಿ.ಸಿ.ಸಂಖ್ಯೆ 132/2021

ಪ್ರಾ.ಸಾ–1

**ದಿನಾಂಕಃ 01.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ– ಶ್ರೀ ಹೆಚ್.ಎನ್.ಬಿ.ಎನ್. – 3 ನೇ ಎದುರುದಾರರ ಪರ ವಕೀಲರಿಂದಃ–**

ನಾನು ಒಂದನೇ ತರಗತಿಯವರೆಗೆ ವ್ಯಾಸಾಂಗ ಮಾಡಿದ್ದೇನೆ.

ಅಪಘಾತದ ದಿನ ನಾನು ನನ್ನ ಊರಿನಿಂದ ಬೆಳಗ್ಗೆ 7.45 ಗಂಟೆಗೆ ಹೊರಟು ತಲಕಾಡಿಗೆ ಹೋಗುತ್ತಿದ್ದೆನು. ಅಪಘಾತವು ಬೆಳಗ್ಗೆ 8.00 ರಿಂದ 8.30 ರ ಸಮಯಕ್ಕೆ ಆಗಿರುತ್ತದೆ. ಅಪಘಾತದಿಂದ ನನ್ನ ಬಲ ಮಂಡಿ, ಬಲಭುಜ, ಮೂಗು, ಕಣ್ಣು ಮತ್ತು ತಲೆಗೆ ಪೆಟ್ಟಾಗಿರುತ್ತದೆ.

ಅಪಘಾತವಾದ ನಂತರ ನನ್ನ ತಾಯಿ ನನ್ನನ್ನು ತಿ.ನರಸೀಪುರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ನಂತರ ನನ್ನನ್ನು ಮೈಸೂರಿನ ಒಂದು ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಲಾಯಿತು.

ನನ್ನ ತಾಯಿ ದೂರನ್ನು ಪೊಲೀಸರಿಗೆ ಅಪಘಾತದ ದಿನವೇ ನೀಡಿರುತ್ತಾರೆ. ಮೈಸೂರಿನ ಆ ಆಸ್ಪತ್ರೆಯಲ್ಲಿ 12 ದಿನಗಳವರೆಗೆ ಒಳರೋಗಿಯಾಗಿದ್ದೆ. ನಾನು ಗುಣಮುಖವಾದ ನಂತರ ಆ ಆಸ್ಪತ್ರೆಯಿಂದ ಬಿಡುಗಡೆಯಾಗಿರುತ್ತೇನೆ ಎಂದರೆ ಸರಿ.

ನನ್ನ ಬಲಭುಜಕ್ಕೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿದೆ. ನನ್ನ ಬಲಭುಜಕ್ಕೆ ರಾಡನ್ನು ಹಾಕಿದ್ದು, ಅದನ್ನು ತೆಗೆಸಲು ರೂ.50,000/– ಅಗತ್ಯವಿದೆ ಎಂದು ವೈದ್ಯರು ಹೇಳಿರುತ್ತಾರೆ.

ಎಂ.ವಿ.ಸಿ.ಸಂಖ್ಯೆ 132/2021

ಪ್ರಾ.ಸಾ-1

ನಾನು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಸುಮಾರು 8 ಬಾರಿ ಮುಂದುವರಿದ ಚಿಕಿತ್ಸೆಗೆ ಹೋಗಿದ್ದೆನು. ಆ ಬಗ್ಗೆ ನಾನು ದಾಖಲೆಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು ಮೊದಲಿನಂತೆ ನನ್ನ ದೈನಂದಿನ ಕೆಲಸಗಳನ್ನು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವೃತ್ತಿಯಲ್ಲಿ ಎಲೆಕ್ಟ್ರಿಷಿಯನ್ ಎಂದು ಮತ್ತು ಅದರಿಂದ ನನಗೆ ದಿನಕ್ಕೆ ರೂ.800/- ಆದಾಯವಿದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ.

ನನಗೆ ಮೋಟಾರು ಸೈಕಲನ್ನು ಚಾಲನೆ ಮಾಡಲು ಚಾಲನ ಪರವಾನಿಗೆ ಇಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತವನ್ನು ಮೋಟಾರು ಸೈಕಲ್ ಸವಾರ ಮಾಡಿರುತ್ತಾನೆ ಎಂದರೆ ಸರಿ. ನನ್ನ ಮೋಟಾರು ಸೈಕಲಿನ ವಿಮಾ ಕಂಪನಿಯನ್ನು ಈ ಪ್ರಕರಣದಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನಗೆ ಅಪಘಾತವನ್ನು ಮಾಡಿದ ಮೋಟಾರ್ ಸೈಕಲಿಗೆ ಅಪಘಾತದ ವೇಳೆಗೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ವೇಳೆಗೆ ಸದರಿ ಮೋಟಾರು ಸೈಕಲಿಗೆ ವಿಮೆ ಇರದ ಕಾರಣ ನನಗೆ ಪರಿಹಾರವನ್ನು ಕೊಡಲು 3 ನೇ ಎದುರುದಾರರು ಹೊಣಗಾಗಿಕೆ ಹೊಂದಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರು ಪಡಿಸಿರುವ ವೈದ್ಯಕೀಯ ಸಲಹಾ ಚೀಟಿಗಳಲ್ಲಿ ಕೆಲವು ಚೀಟಿಗಳಲ್ಲಿ ವೈದ್ಯರ ಸಹಿ, ಮೊಹರು ಮತ್ತು ದಿನಾಂಕ ನಮೂದಿಲ್ಲ ಎಂದರೆ ಸರಿ.

ಅಪಘಾತವು 1 ನೇ ಎದುರುದಾರನ ತಪ್ಪಿನಿಂದ ಆಗಿರದೇ, ನನ್ನ ತಪ್ಪಿನಿಂದ ಆಗಿದೆ

ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**1 ಮತ್ತು 2 ನೇ ಎದರುದಾರರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಪ್ರಾಸಾ–1 ರವರ ಪಾಟೀ ಸವಾಲನ್ನು ಇಲ್ಲವೆಂದು ಪರಿಗಣಿಸಲಾಯಿತು.**

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**
**ತಿ.ನರಸೀಪುರ.**